ಗಳು, ಕೈಗಾರಿಕಾ ಎಸ್ಟೇಟುಗಳು, ಸ್ವಯಉದ್ಯೋಗ ಕಾರ್ಯಕ್ರಮ, ಟೈಸಂ ಇತ್ಯಾದಿ ಬಹುತೇಕ ಯೋಜನೆಗಳನ್ನು ಜಿಲ್ಲಾ ಪರಿಷತ್ತುಗಳು ಜಾರಿಗೊಳಿಸುತ್ತಿವೆ.

೨. ಹೌದು. ಸಹಕಾರ ವಲಯದಲ್ಲಿ ಕೈಮಗ್ಗ, ಕರಕುಶಲ, ತೆಂಗಿನ ನಾರು, ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಅನೇಕ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ಬೀಡಿ ಕೆಲಸಗಾರರಿಗಾಗಿ ಸಹಕಾರ ಸಂಘಗಳನ್ನು ರಚಿಸುವ ವಿಷಯ ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆಯ ತೀವ್ರ ಪರಿಶೀಲನೆಯಲ್ಲಿದೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ಮಾನ್ಯ ಎಂ.ಪಿ. ಪ್ರಕಾಶ್‌ರವರ ಹೆಸರಿನ ಮುಂದಿರುವ ೧೯೬೪ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಶಾಸನದ ೩೦ನೇ ಕಲಮಿನ ಮೇರೆಗೆ.

ರಾಯಚೂರು ಜಿಲ್ಲೆ ಪೋಲೀಸ್ ಕೇಂದ್ರ ಕಚೇರಿಯ ಬಯಲು ಚಿತ್ರಮಂದಿರದಲ್ಲಿ ಚಿತ್ರ ಪ್ರದರ್ಶಿಸಲು ಅನುಮತಿ ಕೋರಿರುವ ಬಗ್ಗೆ ದಿನಾಂಕ ೨೬-೩-೧೯೮೫ರ ರಂದು ಹೊರಡಿಸಲಾದ ಹೆಚ್.ಡಿ. ೩ ಸಿ.ಎನ್.ಎ. ೮೫ನೇ ಆದೇಶವನ್ನು ಸಭೆಯ ಮುಂದಿಡ ಬಯಸುತ್ತೇನೆ.

ಅಧ್ಯಕ್ಷರು.—ಮುಂದಿಡಲಾಯಿತು.

ವರದಿಯನ್ನೊಪ್ಪಿಸುವುದು

ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಆರನೆಯ ವರದಿ

ಅಧ್ಯಕ್ಷರು.—ಶ್ರೀ ಬಿ. ಆರ್. ಯಾವಗಲ್‌ರವರ ಪರವಾಗಿ ನಾನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಗಮನ ಸೆಳೆಯುವ ಸೂಚನೆ

ಕಂಚಿಗಲ್ ತಾಲ್ಲೂಕಿನ ಅಮೃತೂರಿನಲ್ಲಿ ದಲಿತರ ಮೇಲೆ ದೌರ್ಜನ್ಯ ಮತ್ತು ಸಾಮೂಹಿಕ ಬಹಿಷ್ಕಾರ ಹಾಕಿರುವುದು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸಭಾಧ್ಯಕ್ಷರೇ ಕುಣಿಗಲ್ ತಾಲೂಕಿನ ಅಮೃತೂರಿನಲ್ಲಿ ಇತ್ತೀಚೆಗೆ ದಲಿತರ ಮೇಲೆ ನಡೆದ ದೌರ್ಜನ್ಯದಿಂದ ಅವರಿಗೆ ಮಾನಸಿಕ ಹಿಂಸೆಯಾಗಿರುವುದು, ಅವರ ಆಸ್ತಿಪಾಸ್ತಿಗಳ ನಷ್ಟ ಮತ್ತು ಸಾಮಾಜಿಕ ಬಹಿಷ್ಕಾರವನ್ನು ಹಾಕಿರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಜಿ.ಬಸವಣ್ಣಪ್ಪ (ಸಮಾಜಕಲ್ಯಾಣ ಮಂತ್ರಿಗಳು).—ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ.

ಅಧ್ಯಕ್ಷರೇ.—ಕುಣಿಗಲ್ ತಾಲ್ಲೂಕು ಅಮೃತೂರಿನಲ್ಲಿ ಸುಮಾರು ೬೦೦೦ ಜನಸಂಖ್ಯೆ ಇದ್ದು, ಒಕ್ಕಲಿಗ ಮತ್ತು ದಲಿತರು ಜಾಸ್ತಿ ಸಂಖ್ಯೆಯಲ್ಲಿರುತ್ತಾರೆ. ಅಲ್ಲಿ ಪ್ರತಿವರ್ಷ ಏಪ್ರಿಲ್ ತಿಂಗಳಲ್ಲಿ ಪಟಾಲಮ್ಮ ಎಂಬ ಗ್ರಾಮ ದೇವತೆಯನ್ನು ಮೆರವಣಿಗೆಯಲ್ಲಿ ಕೊಂಡು ಹೋಗುವ ಪದ್ಧತಿ ಇದೆ. ಆದರೆ, ಹರಿಜನರ ಓಣಿಗೆ ಹೋಗಿ ಪೂಜೆ ಪಡೆಯುತ್ತಿದ್ದಿಲ್ಲ. ಅಲ್ಲದೆ, ಹರಿಜನರನ್ನು ಪಟಾಲಮ್ಮ ದೇವಸ್ಥಾನದ ಒಳಗೆ ಸಹ ಬಿಡುತ್ತಿರಲಿಲ್ಲ.

ಈ ದೇವಸ್ಥಾನದ ಮೆರವಣಿಗೆಯನ್ನು ನಡೆಸಲು ಬಲಿಜ ಜನಾಂಗದ ಶಾಮಣ್ಣ ಎಂಬುವರ ನೇತೃತ್ವದಲ್ಲಿ ಒಂದು ಸಮಿತಿ ರಚಿಸಲಾಗಿತ್ತು. ಕಳೆದ ವರ್ಷ ಹರಿಜನರು ತಮ್ಮದೇ ಆದ ಹಿರಿಯಮ್ಮ ಎಂಬ ದೇವತೆಯ ಗುಡಿಯನ್ನು ದುರಸ್ತಿ ಮಾಡಿ ಪಟಾಲಮ್ಮ ದೇವತೆಯ ಮೆರವಣಿಗೆಯು ಹರಿಜನರ

ಓಗೆಗೆ ಬರಬೇಕೆಂದು ಒತ್ತಾಯಿಸಿದರು. ಈ ಪ್ರಸ್ತಾವನೆಯನ್ನು ಊರಿನ ಮುಖಂಡರು ಒಪ್ಪದೆ ಇರುವುದರಿಂದ, ಮೆರವಣಿಗೆಯನ್ನು ರದ್ದು ಮಾಡಲಾಯಿತು.

ಈ ವರ್ಷ ದಲಿತರು ಪಟಾಲವ್ಮನನ್ನು ಒಯ್ಯುವ ಪಲ್ಲಕ್ಕಿಯನ್ನು ತಾವೂ ಸಹ ಹೊತ್ತುಕೊಂಡು ಹೋಗಲು ಅವಕಾಶ ಕೊಡಬೇಕೆಂತಲೂ ಮತ್ತು ತಮ್ಮ ಓಣಿಯ ಹಿರಿಯಮ್ಮನ ದೇವಸ್ಥಾನಕ್ಕೆ ಬಂದು ಪೂಜೆ ಮಾಡಿಸಿಕೊಳ್ಳಬೇಕಂತಲೂ ಒತ್ತಾಯಿಸಿರುತ್ತಾರೆ. ದಿ. ೧೬-೧೯೮೮ ರಂದು ಕಾಣಿಗಲ್ ತಹಸೀಲ್ದಾರರು ಎಲ್ಲಾ ಜಾತಿಯ ಮುಖಂಡರನ್ನು ಕರೆಯಿಸಿ, ಹರಿಜನರ ಬೇಡಿಕೆಗಳನ್ನು ಚರ್ಚಿಸಿದಾಗ ಸವರ್ಣೀಯರು ಸದರಿ ಬೇಡಿಕೆಗಳನ್ನು ನಿರಾಕರಿಸಿದರು. ಆದರೂ, ಪೊಲೀಸರು ಮತ್ತು ತಹಸೀಲ್ದಾರರ ಸಲಹೆಯಂತೆ ದಲಿತರು ಪಟಾಲವ್ಮ ಗಂಡಿ ಒಳಗೆ ಹೋಗಿ ಪೂಜೆ ಮಾಡಲು ಒಪ್ಪಿದರು. ಅದರಂತೆ ಪೂಜೆ ಮಾಡಲಾಯಿತು. ಇದರ ಬಗ್ಗೆ ಸವರ್ಣೀಯರ ಮನಸ್ಸಿನಲ್ಲಿ ನಿರಶನ ಉಂಟಾಗಿದೆ.

ಅದೇ ದಿನ ರಾತ್ರಿ ೯ ಗಂಟೆಗೆ, ಕೆಲವು ದಲಿತರು ಬಲರಾಜ್ ಎಂಬ ಬೆಸ್ತರ ಮಂಡಗನನ್ನು ಸೇಂದಿ ಅಂಗಡಿ ಬಳಿ, ತಾವು ಪಟಾಲಮ್ಮ ದೇವಸ್ಥಾನದ ಒಳಗೆ ಹೋಗಿದ್ದರ ಬಗ್ಗೆ ಹೊಡೆದಿರುತ್ತಾರೆ. ಈ ಸಂಬಂಧದಲ್ಲಿ ಅಮೃತೂರು ಠಾಣೆಯಲ್ಲಿ ಒಂದು ಕೇಸನ್ನು ದಾಖಲು ಮಾಡಿಕೊಳ್ಳಲಾಗಿದೆ. ದಿ. ೧೬-೧೯೮೮ ರಂದು, ಸ್ಥಳೀಯ ಸಬ್ ಇನ್ಸ್‌ಪೆಕ್ಟರ್‌ರವರು ಈ ಎರಡು ಗುಂಪುಗಳ ನಡುವೆ ಉದ್ಭವವಾದ ಪರಿಸ್ಥಿತಿಯನ್ನರಿತು, ತಮ್ಮಕೂರಿಗೆ ಹೆಚ್ಚಿನ ಸಿಬ್ಬಂದಿಯನ್ನು ಕಳುಹಿಸಲು ಸಂದೇಶ ಕೊಟ್ಟು ತಮ್ಮ ಬಳಿಯಿದ್ದ ಇಬ್ಬರು ಕಾನ್ಸ್‌ಟೇಬಲ್‌ಗಳೊಂದಿಗೆ ಹರಿಜನ ಕೇರಿಗೆ ತಲುಪಿದರು. ಆಗ ೫೦೦ ಮಂದಿ ಸವರ್ಣೀಯರು ಒಂದು ಕಡೆ ಮತ್ತು ೩೦೦ ಮಂದಿ ದಲಿತರು ಇನ್ನೊಂದು ಕಡೆ ಸೇರಿ ಭೀಕರವಾಗುವ ಪರಿಸ್ಥಿತಿಯನ್ನು ಹತೋಟಿಗೆ ತಂದು, ಎಸ್.ಐ ರವರು ಎರಡು ಗುಂಪುಗಳನ್ನು ಚದುರಿ ಹೋಗಲು ತಿಳಿಸಿದರು.

ಮರಳಿ ಹೋಗುತ್ತಿದ್ದ ಸವರ್ಣೀಯರು ಸಣ್ಣ ಸಣ್ಣ ಗುಂಪುಗಳಾಗಿ ಕಲ್ಲು ತೂರಾಟ ನಡೆಸಿ ಓಡಿಹೋಗಿದರು. ಆದರಲ್ಲಿ ಒಂದು ಗುಂಪು ಪ್ರಕಾಶ್ ಎಂಬುವವರ ನೇತೃತ್ವದಲ್ಲಿ ಮೂರು ಸಲ ಹರಿಜನರ ಮೇಲೆ ಕಲ್ಲು ಎಸೆದು ಅವರ ಮನೆಗಳಿಗೆ ಲಂಕ್ಷನ್ ಮಾಡಿರುತ್ತಾರೆ. ಈ ಮೂರು ಘಟನೆಗಳ ಬಗ್ಗೆ, ಮೂರು ಕೇಸುಗಳನ್ನು ದಾಖಲು ಮಾಡಿಕೊಂಡಿದ್ದು, ತನಿಖೆಯು ಹಂತದಲ್ಲಿವೆ.

ತುಮಕೂರು ಜಿಲ್ಲೆ ಪೋಲಿಸ್ ಅಧಿಕಾರಿಗಳು ಅದೇ ಸಂಧ್ಯಾಹ್ನ ಸಿಬ್ಬಂದಿಯೊಂದಿಗೆ ಅಮೃತೂರಿಗೆ ಭೇಟಿ ಇತ್ತು ಪರಿಸ್ಥಿತಿಯನ್ನು ಹತೋಟಿಗೆ ತಂದಿರುತ್ತಾರೆ

ದಿನಾಂಕ ೧೮-೪-೧೯೮೮ ರಂದು ಅಮೃತೂರಿನಲ್ಲಿ ನಿಷೇಧಾಜ್ಞೆಯನ್ನು ಜಾರಿ ಮಾಡಲಾಗಿದೆ. ದಿನಾಂಕ ೨೦-೪-೧೯೮೮ ರಂದು ಸ್ಥಳೀಯ ಪೋಲೀಸರು ಮತ್ತು ರೆವಿನ್ಯೂ ಅಧಿಕಾರಿಗಳು ಅಮೃತೂರಿನಲ್ಲಿ ಎಲ್ಲಾ ಜಾತಿಯ ಮುಖಂಡರುಗಳನ್ನು ಸೇರಿಸಿ ಸಭೆ ನಡೆಸಿರುತ್ತಾರೆ. ಈ ಸಭೆಯಲ್ಲಿ ಅನುಮೋದಿಸಿದ ಪ್ರಸ್ತಾವನೆಯಂತೆ ದಿನಾಂಕ ೨೨-೪-೧೯೮೮ ರಂದು ಪಟಾಲಮ್ಮ ಮೆರವಣಿಗೆಯನ್ನು ಎಲ್ಲಾ ಜಾತಿಯವರು ಸೇರಿ ಮಾಡಿರುತ್ತಾರೆ. ಆದರೆ, ಒಂದೊಂದು ಓಣಿಗೆ ಹೋಗುವ ಪದ್ಧತಿಯನ್ನು ಕೈಬಿಟ್ಟು ಮುಖ್ಯ ರಸ್ತೆಗಳಲ್ಲಿ ಮಾತ್ರ ಮೆರವಣಿಗೆಯನ್ನು ಕೊಂಡೊಯ್ಯಲಾಯಿತು.

ದಿನಾಂಕ ೨೨-೪-೧೯೮೮ ರಂದು ೨೧ ಜನ ಸವರ್ಣೀಯರು ಮತ್ತು ೩ ಹರಿಜನರನ್ನು ದಸ್ತಗಿರಿ ಮಾಡಲಾಗಿ ಕಾಣಿಗಲ್ ಮ್ಯಾಜಿಸ್ಟ್ರೇಟರವರು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾರೆ. ದಿನಾಂಕ ೩೦-೪-೧೯೮೮ ರಂದು ೫ ಸವರ್ಣೀಯರನ್ನು ದಸ್ತಗಿರಿ ಮಾಡಲಾಗಿ ಅವರನ್ನು ಸಹ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಸವರ್ಣೀಯರು ಹಲ್ಲೆ ನಡೆಸಿದಾಗ ಮುಂದಾಳತ್ವ ವಹಿಸಿದ ಪ್ರಕಾಶ್ ಮತ್ತು ಹನುಮೆಗೌಡ ತಲೆ ಮರೆಸಿಕೊಂಡಿದ್ದಾರೆ. ಅವರನ್ನು ಸಧ್ಯದಲ್ಲೇ ದಸ್ತಗಿರಿ ಮಾಡಲಾಗುವುದು. ಹರಿಜನರ ಮೇಲೆ ನಡೆದ ಹಲ್ಲೆಯಲ್ಲಿ ಕಲಪರಿಗೆ ಸಣ್ಣ ಪುಟ್ಟ ಗಾಯಗಳು ಆಗಿವೆ ಕೆಲವರ ಮನೆಗಳ ಹೆಂಚುಗಳು ಒಡೆದು ಹೋಗಿವೆ. ಹರಿಜನ ವೆಂಕಟರವಣಪ್ಪನವರ ಹಲ್ಲು ಜಖಮೆ ಸುಟ್ಟು ಹೋಗಿ ಅವರಿಗೆ ಸುಮಾರು ೫,೦೦೦ ರೂ.ಗಳು ನಷ್ಟವಾಗಿದೆ. ಪ್ರಸ್ತುತ ಪರಿಸ್ಥಿತಿ ಶಾಂತವಾಗಿದೆ ಸ್ಥಳೀಯ ಎಸ್ ಐ. ರವರು ಕ್ರಮ ತೆಗೆದುಕೊಳ್ಳುವುದರಲ್ಲಿ ವಿಳಂಬ ಮಾಡಿದ್ದರೆಂದು ಆಪಾದಿಸಿದ್ದು ಸದರಿಯವರನ್ನು ವರ್ಗಮಾಡಿ ವಿಚಾರಣೆ ನಡೆಸಲಾಗುತ್ತಿದೆ. ಈ ಘಟನೆಗೆ ಕಾರಣರಾದ ವ್ಯಕ್ತಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕಾನೂನಿನ ಪ್ರಕಾರ ಕ್ರಮತೆಗೆದು ಕೊಳ್ಳುತ್ತೇವೆ.

ಸಿ.ಆರ್.ಇ. ಸೆಲ್‌ನ ಅಧಿಕಾರಿಗಳು ಈ ವಿಷಯದ ಬಗ್ಗೆ ವಿಚಾರಣೆ ನಡೆಸಿರುತ್ತಾರೆ. ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್‌ರವರು, ಡೆಪ್ಯುಟಿ ಕಮಿಷನರ್‌ರವರಿಗೆ ವರದಿ ಕಳುಹಿಸಿ ಹಲ್ಲೆಗೊಳಗಾದ ಹರಿಜನರಿಗೆ ಪರಿಹಾರವನ್ನು ಕೊಡಲು ಸಲಹೆ ಮಾಡಿರುತ್ತಾರೆ. ಹರಿಜನರ ಮೇಲೆ ಸಾಮಾಜಿಕ ಬಹಿಷ್ಕಾರದ ಬಗ್ಗೆ ಸಿ.ಆರ್.ಇ. ಸೆಲ್ ವಿಚಾರಣೆ ಮಾಡಲಾಗಿದೆ. ಸವರ್ಣೀಯರು ಹರಿಜನರನ್ನು ಕೂಲಿ ಕೆಲಸಕ್ಕೆ ತೆಗೆದುಕೊಳ್ಳುತ್ತಿಲ್ಲವೆಂದು ತಿಳಿದು ಬಂದಿದೆ. ಇದು ಬಿಟ್ಟು ಬೇರೆ ಯಾವ ರೀತಿಯ ಸಾಮಾಜಿಕ ಬಹಿಷ್ಕಾರವಾಗಿಲ್ಲ. ಹರಿಜನರಿಗೆ ಸದ್ಯದಲ್ಲೇ ಕೂಲಿ ಕೆಲಸ ಕೊಡಿಸುವ ವಿಷಯದಲ್ಲಿ ಮಾಡತ್ತಿದ್ದೇವೆ. ತುಮಕೂರು ಡೆಪ್ಯುಟಿ ಕಮಿಷನರ ಮತ್ತು ಪೋಲೀಸ್ ಸೂಪರಿಂಟೆಂಡೆಂಟರು ತಕ್ಷಣ ಅಮೃತ್ತೂರಿಗೆ ಭೇಟಿ ನೀಡಿ ಎಲ್ಲ ಜಾತಿಯ ಮುಖಂಡರುಗಳೊಂದಿಗೆ ಚರ್ಚಿಸಿ, ಹರಿಜನರನ್ನು ಕೂಲಿ ಕೆಲಸಕ್ಕೆ ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ತಿಳಿಸಿರುತ್ತಾರೆ.

೧೦-೩೦ ಎ ಎಂ.

ಪ್ರತ್ಯಕ್ಷವಾಗಿ ನಾನೂ ಕೂಡ ಅಲ್ಲಿಗೆ ಹೋಗಿದ್ದೆ. ಈ ಒಂದು ಗಾಟೆಯ ಹಿನ್ನಲೆಯನ್ನೂ ಕೂಡ ನಾನು ತಿಳಿದುಕೊಂಡಿದ್ದೇನೆ. ಅಲ್ಲಿ ಅಗತ್ಯ ವಸ್ತುಗಳ ವಿತರಣೆಯಲ್ಲಿ ಬಹಳ ತೊಂದರೆ ಇದೆ ಎಂಬುದು ನನಗೆ ತಿಳಿಯಿತು. ಅಗತ್ಯ ವಸ್ತುಗಳ ವಿತರಣೆ ಮಾಡುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಬೇಕೆಂದು ಮುಖ್ಯ ಕಾರ್ಯದರ್ಶಿಯವರಿಗೆ ಹೇಳಿ ಕ್ರಮ ಕೈಗೊಳ್ಳಲಾಗಿದೆ. ಮತ್ತು ಅವರಿಗೆ ಉದ್ಯೋಗವನ್ನು ಒದಗಿಸುವುದಕ್ಕಾಗಿ ಜಿಲ್ಲಾ ಪರಿಷತ್ತಿನಿಂದ ೬೦ ಸಾವಿರ ರೂಪಾಯಿಗಳ ಹಣವನ್ನು ಮಂಜೂರು ಮಾಡಿ ವಿಲೇಜ್ ಸ್ಯಾನಿಟೇಷನ್, ಡ್ರೈನೇಜ್ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಆಮೇಲೆ ೩ ಜನರನ್ನು ಗಾಯಗೊಂಡಿದ್ದಾರೆ, ಶ್ರೀ ಮಾನ್ ಎಲ್ಲಪ್ಪ, ಶ್ರೀ ನಾರಾಯಣ ಹಾಗೂ ಶ್ರೀ ರಾಮಮೂರ್ತಿ ಇವರಿಗೆ ತಲಾ ಒಂದು ಸಾವಿರ ರೂಪಾಯಿಗಳಂತೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಸಹಾಯವನ್ನು ಒದಗಿಸುವ ವ್ಯವಸ್ಥೆ ಮಾಡಲಾಗಿದೆ. ಅಲ್ಲಿ ಪ್ರತ್ಯೇಕ ನ್ಯಾಯಬೆಲೆ ಅಂಗಡಿ ಬೇಕೆಂದು ಕೇಳಿದರು. ಆದಕ್ಕಾಗಿ ಹಸಿರು ಕಾರ್ಡುದಾರರು ಯಾರ್ಯಾರು ಇದ್ದಾರೆ ಅವರೆಲ್ಲರೂ ಸೇರಿ ಒಂದು ಬಳಕೆದಾರರ ಸಹಕಾರ ಸಂಘ ಮಾಡಿಕೊಂಡರೆ ಆ ಬಗ್ಗೆ ನಿಯಮಗಳಿಗೆ ಅವಕಾಶ ಮಾಡಿಕೊಡಲಾಗುವುದು ಎಂಬುದಾಗಿ ತಿಳಿಸಿದ್ದೇನೆ. ಅವರು ಸಹಕಾರ ಸಂಘವನ್ನು ಮಾಡಿಕೊಂಡ ಮೇಲೆ ಈ ರೀತಿ ವ್ಯವಸ್ಥೆ ಮಾಡಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಈ ಘಟನೆಯನ್ನು ನೋಡಿದರೆ ಇದರಲ್ಲಿ ಏನೋ ಎಸ್.ಸಿ ಜನಾಂಗದವರದ್ದು ತಪ್ಪು ಇದೆ, ಅಥವಾ ಊರಿನಲ್ಲಿರತಕ್ಕ ಕೆಲವರು ಅವರ ಮೇಲೆ ದೌರ್ಜನ್ಯ ಮಾಡಿದ್ದಾರೆ ಎಂದು ಹೇಳಿದರೆ ಆ ಮಾತು ಬೇರೆ. ದೇವರನ್ನು ಎಲ್ಲರೂ ಪೂಜೆ ಮಾಡುತ್ತಾರೆ. ಪಟಾಲಮ್ಮ ದೇವಸ್ಥಾನಕ್ಕೆ ನಾವೂ ಕೂಡ ಬಂದು ಪೂಜೆ ಮಾಡುತ್ತೇವೆ ಹೊಣೆ ಹೊಣೆಗೂ ದೇವರು ಹೋಗುವ ರೀತಿಯಲ್ಲಿ ನಮ್ಮ ಹೊಣೆಗೂ ದೇವರನ್ನು ತನ್ನಿ ಎಂದು ಹೇಳಿದ್ದುದು ತಪ್ಪೇ ? ಅವರು ಯಾವ ಧರ್ಮದಲ್ಲಿ ಇರುತ್ತಾರೆ ಆ ಧರ್ಮದ ದೇವತೆಗಳನ್ನು ಪೂಜೆ ಮಾಡುತ್ತೇವೆ ಎಂದರೆ ನೀವು ಮಾಡುವುದಕ್ಕೆ ಯೋಗ್ಯರಲ್ಲ ಎಂದು ಹೇಳಿದರೆ ಇದು ಯಾವ ನ್ಯಾಯ ? ಇಲ್ಲ. ಇವರು ಏನಾದರೂ ತೊಂದರೆ ಕೊಟ್ಟು ಯಾರಿಗಾದರೂ ಹೆರಾಶ್‌ಮೆಂಟ್ ಮಾಡಿ, ಯಾರನ್ನಾದರೂ ಕಿಡ್ನಾರ್ ಮಾಡಿದ್ದರೆ, ಯಾರಮೇಲಾದರೂ ಅಟ್ಯಾಕ್‌ಮಾಡಿ ಲೂಟಿ ಮಾಡಿದ್ದರೆ ಸರಿ ಎನ್ನಬಹುದು ಪೂಜೆ ಮಾಡುವುದಕ್ಕೆ ಹೋದರೆ, ದೇವರ ದರ್ಶನ ತೆಗೆದುಕೊಳ್ಳುವುದಕ್ಕೆ ಹೋದರೆ ನಮ್ಮಲ್ಲಿಗೇ ಬನ್ನಿ ನಾವೇ ಪೂಜೆ ಮಾಡುತ್ತೇವೆ ಎಂದು ಈ ರೀತಿ ಹಿಂಸೆ ಕೊಟ್ಟರೆ ಮತ್ತು ಇದಕ್ಕೆ ರಾಜಕಾರಣಿಗಳು ಮತ್ತು ಪೋಲೀಸರು ಕೂಡ ಸಪೋರ್ಟ್ ಕೊಟ್ಟು ಕೊಂಡರೆ ಎಲ್ಲಿಯವರೆಗೆ ಈ ಜನ ತಾಳುವುದಕ್ಕೆ ಸಾಧ್ಯ ?

ಅಧ್ಯಕ್ಷರು.—ಅಲ್ಲಿ ಪೋಲೀಸರು ಸಪೋರ್ಟ್ ಕೊಟ್ಟರು ಎಂದು ಇದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಲ್ಪ ಕೇಳಿ ಸ್ವಾಮಿ. ಇಷ್ಟೆಲ್ಲ ಹೊಡೆದು ಬಡಿದು ಮಾಡಿದರೂ ಕೂಡ ಪೋಲೀಸರು ಬಹಳ ತಡವಾಗಿ ಬಂದು ರಕ್ಷಣೆ ಕೊಡತಕ್ಕದ್ದನ್ನು ಮಾಡಿದ್ದಾರೆ. ಇದು ಒಂದು ಕಡೆ. ಎರಡನೆಯದ್ದು, ಈ ಘಟನೆ ಆದಮೇಲೆ ಏಷ್ಟೋ ದಿವಸಗಳ ಮೇಲೆ ಡೆಪ್ಯುಟಿ ಕಮೀಷನರ್ ಎಲ್ಲಾ ಆಕ್ಷನ್ ತೆಗೆದುಕೊಂಡಿದ್ದಾರೆ. ಅಲ್ಲಿಯವರೆಗೆ ಅವರು ಹೋಗಿಲ್ಲ. ಮೂರನೆಯದಾಗಿ ಕೆಲಸ ಕೊಡುವ ಬಗ್ಗೆ ಮಾನ್ಯ ಮಂತ್ರಿಗಳು ಹೇಳುತ್ತಾರೆ. ಅಲ್ಲಿ ಕೆಲಸ ಕೊಡಲಿಕ್ಕೆ ಯಾರೂ ತಯಾರಿಲ್ಲ. ಆದ್ದರಿಂದ ಇದನ್ನು ಸೋಶಿಯಲ್ ಬಾಯಕಾಟ್ ಎಂದು ತಿಳಿಯಕೂಡದು ಎಂದು

ಹೇಳುತ್ತಾರೆ, ಕೆಲಸಕ್ಕೆ ತೆಗೆದುಕೊಳ್ಳಲಿಕ್ಕೆ ತಯಾರಿಲ್ಲ ಎಂದರೆ ಏನು ಅರ್ಥ ? ನೀವು ಕೆಲಸ ಮಾಡಬಾರದು ಊರು ಬಿಟ್ಟು ಹೋಗಿ ಎಂದು ಅರ್ಥವಲ್ಲವೇ ?

ಅಧ್ಯಕ್ಷರು.—ಉತ್ತರದ ಮೇಲೆ ಕ್ಲಾರಿಫಿಕೇಶನ್ ಕೇಳಿ. ಏನು ಆಗಬೇಕೆಂದು ಹೇಳಿ,

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಇಂತಹ ಘಟನೆಗಳು ಇದು ಒಂದೇ ಅಲ್ಲ. ನಾನು ನೇರವಾಗಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ಪ್ರಶ್ನೆ ಹಾಕಿದ್ದುದು ಏಕೆಂದರೆ ಇದು ಲಾ ಅಂಡ್ ಆರ್ಡರ್ ಸಿಚ್ಯುಯೇಶನ್ ಪ್ರಶ್ನೆ. ಇದು ಒಂದೇ ಕಡೆಯಲ್ಲ. ಇಂತಹ ಘಟನೆಗಳು ಅನೇಕ ಕಡೆ ನಡೆಯುತ್ತಿವೆ.

ಅಧ್ಯಕ್ಷರು,—ಇದೆಲ್ಲಾ ಡಿಪಾರ್ಟ್‌ಮೆಂಟ್ ಮೇಲೆ ಚರ್ಚೆಯಾದಾಗ ಹೇಳಿ. ಈಗ ಕ್ಲಾರಿಫಿಕೇಶನ್ ಮಾತ್ರ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ನಾನು ಕೇಳುತ್ತಿರುವುದು ಇದನ್ನು ನೀವು ಏಕೆ ಮಾಡುತ್ತಿದ್ದೀರಿ ಎಂದು. ಇವತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಹೊಡೆದು ಅವರ ಮನೆಗೆ ಬೆಂಕಿ ಇಟ್ಟು, ಸುಟ್ಟು ಹಾಳು ಮಾಡಿದ್ದರ ಬಗ್ಗೆ ಕೇಳಲಿಕ್ಕೆ ಅವಕಾಶ ಇಲ್ಲವೆಂದರೆ ಮತ್ತೆ ಏಕೆ ನಾವು ಕಾಲಿಂಗ್ ಅಟೆನ್‌ಶನ್ ಹಾಕಬೇಕು?

ಅಧ್ಯಕ್ಷರು.—ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ಅದರ ಮೇಲೆ ಕ್ಲಾರಿಫಿಕೇಶನ್ ಬೇಕಾದರೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ಇಲ್ಲಿ ಏನು ಆಗಿದೆ ಎಂದರೆ ಒಬ್ಬರು ಅಲ್ಲ ಇಬ್ಬರು ಮಂತ್ರಿಗಳು ಇದ್ದರು. ಶ್ರೀ ವೈ ಕೆ. ರಾಮಯ್ಯನವರು ಅಲ್ಲಿಯವರೇ, ಶ್ರೀ ಲಕ್ಷ್ಮೀನರಸಿಂಹಯ್ಯನವರು ಅಲ್ಲಿಯವರೇ, ಮತ್ತು ವೀರಣ್ಣನವರೂ ಅಲ್ಲಿಯವರೇ. ಮೂರು ಜನ ಮಂತ್ರಿಗಳು ಇದ್ದರೂ ಕೂಡ ಆ ಜನಕ್ಕೆ ರಕ್ಷಣೆ ಕೊಡಲಿಕ್ಕೆ ಆಗಲಿಲ್ಲವೆಂದರೆ ಇನ್ನು ಯಾರನ್ನು ಕೇಳೋಣ? ಅವರು ಏನಾದರೂ ದೌರ್ಜನ್ಯ ಮಾಡಿದ್ದರೆ ಅದಕ್ಕೆ ಅವರಿಗೆ ಶಿಕ್ಷೆ ಕೊಟ್ಟಿದ್ದರೆ ಆ ಮಾತು ಬೇರೆ. ಆದರೆ ದೇವಸ್ಥಾನಕ್ಕೆ ಹೋಗುವುದಕ್ಕೆ ಅವರನ್ನು ಅಲೋ ಮಾಡುವುದಿಲ್ಲ, ರಕ್ಷಣೆ ಕೊಡುವುದಿಲ್ಲ, ಕೂಲಿ ಕೆಲಸಕ್ಕೆ ರಕ್ಷಣೆ ಕೊಡುವುದಿಲ್ಲ ಎಂದರೆ ಸರ್ಕಾರದ ಬೆಂಬಲ ಬೇರೆಯವರಿಗೆ ಇದೆಯೆಂದು ತಿಳಿಯೋಣವೆ? ಸವರ್ಣೀಯರು ಹೆಚ್ಚು ಸಂಖ್ಯೆಯಲ್ಲಿದ್ದಾರೆ ಇದು ಸಂಖ್ಯೆ ಕಡಿಮೆ ಇವೆ ಆದ್ದರಿಂದ ರಕ್ಷಣೆ ಕೊಡುವುದಿಲ್ಲ ಎಂದು ತಿಳಿಯಬೇಕೆ? ಅಲ್ಲಿಯ ಊರಿನ ಜನ ಹೇಳುತ್ತಾರೆ. ನಾವು ಕಾಂಗ್ರೆಸ್ಸಿಗೆ ಓಟು ಕೊಟ್ಟರೂ ನಮ್ಮ ಗತಿ ಇದೇ, ಜನತಾಗೆ ಓಟು ಕೊಟ್ಟರೂ ನಮ್ಮ ಗತಿ ಇದೇನೆ. ಈ ಸಲ ಜನತಾಗೆ ಓಟು ಕೊಟ್ಟೆವು. ಅದರೂ ಕೂಡ ಈ ಪರಿಸ್ಥಿತಿ ಇದೆಯೆಂದು ಅವರು ಹೇಳಿದ್ದಾರೆ. ಇಲ್ಲಿ ಪಕ್ಷದ ಪ್ರಶ್ನೆ ಇಲ್ಲ. ನಾನು ಕೇಳುವುದು ಯಾವ ಧರ್ಮದಲ್ಲಿ ಅವರು ಇದ್ದು ಆ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡುತ್ತೇವೆ ಎಂದರೆ ಈ ರೀತಿಯ ಆತಂಕಗಳನ್ನು ಒಡ್ಡಿದರೆ ನಾಳೆ ನೀವು ಯಾವ ರೀತಿಯಿಂದ ನೀವು ನಮ್ಮವರು ನಮ್ಮನ್ನು ಅಪ್ಪಿಕೊಳ್ಳಿ ಎಂದು ಹೇಳುತ್ತೀರಿ? ನಾನು ನೇರವಾಗಿ ಕೇಳುತ್ತೇನೆ, ಇದಕ್ಕೆ ಪ್ರಯತ್ನ ಏಕೆ ಮಾಡುತ್ತಿಲ್ಲ? ಇದು ಒಂದೇ ಅಲ್ಲ. ತವರಿಗೆ ಗೊತ್ತಿರುವ ಹಾಗೆ ಬೆಳಗಾವಿಯಲ್ಲಿ ಇದೇ ರೀತಿ ಆಯಿತು. ಸೊರಬದಲ್ಲೂ ಆಯಿತು. ಈ ಎಲ್ಲಾ ದೌರ್ಜನ್ಯಗಳು ಒಂದೇ ಕಡೆ ಅಲ್ಲ, ಎಲ್ಲೂ ಕಡೆ ನಡೆಯುತ್ತಿವೆ. ಈ ಷೆಡ್ಯೂಲ್ಡ್ ಕ್ಯಾಸ್ಟ್‌ಮೇಲೆ ಉದ್ದೇಶಪೂರ್ವಕವಾಗಿ ವೆಸ್ಟೆಡ್ ಇಂಟರೆಸ್ಟ್‌ನವರು ಅಟ್ರಾಸಿಟಿಯನ್ನು ಮಾಡುತ್ತಲೇ ಇದ್ದಾರೆ. ಇದರಿಂದ ಇವರು ಸೋತು ನಾವು ಇವರ ಗೋಜಿಗೆ ಏಕೆ ಹೋಗಬೇಕು ಎಂದು ಮೊದಲೇ ಇರುವಂಥ ಪರಿಸ್ಥಿತಿಯನ್ನು ತರುತ್ತಿದ್ದಾರೆ. ಇದು ಪಾರ್ಟಿ ಪಕ್ಷದ ಪ್ರಶ್ನೆ ಅಲ್ಲ. ಅವರು ಮುಂದೆ ಬರುವುದನ್ನು ಸಹಿಸದೆ ಇರತಕ್ಕಂಥ ರೀತಿಯಲ್ಲಿ ಕೆಲವು ಜನ ನೋಡುತ್ತಿದ್ದಾರೆ. ಹೀಗಿರುವಾಗ ಸರ್ಕಾರದವರು ಇವರಿಗೆ ಕಾನೂನು ಪ್ರಕಾರವಾದರೂ ರಕ್ಷಣೆ ಕೊಡಬೇಡವೆ? ಇವ್ಹೊತ್ತು ಕೆಲಸ ಕೊಡಲಿಲ್ಲ ಎಂದರೆ ಏಕೆ ಕೊಡಲಿಲ್ಲ ಎಂದು ನಾನು ಕೇಳುತ್ತೇನೆ, ಅವರು ಮಾಡಿದರು ಎಂದರೆ ಸೋಶಿಯಲ್ ಬಾಯ್‌ಕಾಟ್ ಮಾಡಿದ್ದಕ್ಕೆ ಸಂಪೂರ್ಣವಾಗಿ ಫೈನಾನ್ಷಿಯಲ್ ಫೈನ್ ಅನ್ನು ಇಂಡಿಯನ್ ಪೀನಲ್‌ಕೋಡ್ ಪ್ರಕಾರ ಹಾಕಿ. ಅವರ ತಲೆಮೇಲೆ ಈ ಟ್ಯಾಕ್ಸ್ ಹಾಕಿ ಆ ಹಣದಿಂದ ಈ ಜನರನ್ನು ಸಾಕತಕ್ಕಂಥ ವ್ಯವಸ್ಥೆ ಮಾಡಿ. ಇದನ್ನು ಎಲ್ಲಿಯವರೆಗೆ ಮಾಡುವುದಿಲ್ಲವೋ ಅಲ್ಲಿಯವರೆಗೆ ಇವರಿಗೆ ಬುದ್ಧಿ ಬರುವುದಿಲ್ಲ ಇದಕ್ಕಾಗಿ ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿ ಕೊಳ್ಳುತ್ತೇನೆ ಏನೆಂದರೆ ತಾವು ಇದಕ್ಕೆ ಧೈರ್ಯವಹಿಸಬೇಕಾಗುತ್ತದೆ. ಧೈರ್ಯ ಮಾಡಿಲ್ಲವೆಂದರೆ ಇಂತಹ ಕೆಲಸ ತಪ್ಪುವುದಿಲ್ಲ. ಯಾರು ಮಿನಿಸ್ಟರು ಇದ್ದಾರೆ, ಅವರಿಗೆ ರಕ್ಷಣೆಯನ್ನು ಕೊಡತಕ್ಕಂಥ

ಕೆಲಸವನ್ನು ಸರ್ಕಾರ ಮಾಡದೇಹೋದರೆ ಇನ್ನು ಯಾರು ಮಾಡಬೇಕು? ಇವತ್ತು ಈ ಜನರಿಗೆ ಯಾವ ಪರಿಹಾರವೂ ಇಲ್ಲ. ಮನೆ ಕಳೆದುಕೊಂಡವರಿಗೆ ಮನೆ ಕೊಡುವ ವ್ಯವಸ್ಥೆ ಆಗಿದೆಯೆ? ಮನೆ ಕಟ್ಟಿಸಿಕೊಡತಕ್ಕಂಥ ವ್ಯವಸ್ಥೆ ಆಗಿದೆಯೆ? ಅವರಿಗೆ ಕೂಲಿ ಇಲ್ಲ. ಕೂಲಿ ಕೊಡತಕ್ಕಂಥ ವ್ಯವಸ್ಥೆ ಎಂದು ನೀವು ಡೈನೇಜ್ ಕೆಲಸ ಎಂದು ಹೇಳಿ ೬೦ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದೀರಿ ಎಂದು ಹೇಳಿದಿರಿ. ಆ ಊರಿನಲ್ಲಿ ಮಂಡಲ ಪ್ರಧಾನರನ್ನು ಹಿಡಿದು ಎಲ್ಲರೂ ಕೂಡ ಕೋಆಪರೇಟ್ ಮಾಡುವುದಿಲ್ಲ. ಇನ್‌ಕ್ಲೂಡಿಂಗ್ ಮಂಡಲ್ ಪಂಚಾಯ್ತಿ ಪ್ರಧಾನರು, ಇವರೆಲ್ಲರೂ ಸೇರಿ ಯಾರೂ ಕೂಡ ಕೋಆಪರೇಟ್ ಮಾಡುವುದಿಲ್ಲ. ಅದಕ್ಕೆ ಆ ಕಾಂಟ್ರಾಕ್ಟನ್ನು ಬೇರೆಯವರ ಕೈಯಿಂದ ಮಾಡಿಸುತ್ತಿದ್ದಾರೆ. ಅದಕ್ಕೆ ದಯವಿಟ್ಟು, ತಕ್ಷಣ ಸರ್ಕಾರ ಮನಸ್ಸಿಟ್ಟು ಈ ರೀತಿಯಾದ ಅಟ್ರಾಸಿಟಿ ಮಾಡಿದರೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂಬ ಭಯ ಜನರಲ್ಲಿ ಬರಬೇಕು. ಇಂಥ ಸಂದರ್ಭಗಳಿಗೆ ಸರ್ಕಾರ ಏನು ಕ್ರಮ ಹಾಕಿಕೊಳ್ಳುತ್ತದೆ ಎನ್ನುವುದನ್ನು ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಇವತ್ತು ಇಲ್ಲಿ ಇದ್ದಾರೆ. ಇಂತಹ ಘಟನೆಗಳು ರಾಯಚೂರಿನಲ್ಲಿ ಆಯಿತು, ಮತ್ತೆ ಎಲ್ಲಾ ಕಡೆಯೂ ಆಗುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಆರ್ಥಿಕ ದಿಗ್ಬಂಧನ ಮಾಡುವುದಾದ್ದು ಕೂಡ ಸರ್ವೇ ಸಾಧಾರಣ. ಇದಕ್ಕೆ ಪರಿಹಾರ ಏನು ಎನ್ನುವುದನ್ನು ನಾವೆಲ್ಲಾ ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ, ಸಮಾಜದಲ್ಲಿ ಬದಲಾವಣೆ ಮಾಡುವ ಇಂತಹ ನೂರಾರು ಸಮಸ್ಯೆಗಳು ಇದ್ದೇ ಇರುತ್ತವೆ. ಸರ್ವೇಸಾಧಾರಣವಾಗಿ ಎಷ್ಟೆತ್ತ ಜನ ತಲೆ ಎತ್ತುವಾಗ ಇಂತಹ ಪ್ರತಿಭಟನೆಗಳು, ಕನ್‌ಫ್ರೊಂಟೇಷನ್ ಬರತಕ್ಕಂಥಾದ್ದು ಸ್ವಾಭಾವಿಕ. ಇಲ್ಲದೇ ಹೋದರೆ, they cannot adjust themselves. ತಲೆಬಾಗಿ ಗುಲಾಮಿ ವೃತ್ತಿಯಿಂದ ಜೀವನ ಮಾಡತಕ್ಕಂಥ ಜನಗಳಿಗೆ ಇಂತಹ ಸನ್ನಿವೇಶ ಬಂದಾಗ, ಇಂತಹ ಸಂಘರ್ಷಗಳು ಆದಾಗ, ಹೊಡೆದಾಟ, ಬಡಿದಾಟ ಆಗಿ ಒಂದು ಸ್ಥಿಮಿತಕ್ಕೆ ಬರುತ್ತಾರೆ. ಇಂತಹ ಪರಿಸ್ಥಿತಿ ಬಂದಾಗ ಯಾರು ಬಲಾಢ್ಯ ಜನ ಇದ್ದಾರೆ ಅವರು ಇವರ ಮೇಲೆ ದಬ್ಬಾಳಿಕೆ ಮಾಡುತ್ತಾರೆ ಆರ್ಥಿಕ ದಿಗ್ಬಂಧನ ಹಾಕಿದಾಗ, ಇವರ ಹೆಣ್ಣುಮಕ್ಕಳಿಗೆ ಅವಮಾನ ಮಾಡಿದಾಗ, ಇಂತಹ ಪರಿಸ್ಥಿತಿಯಲ್ಲಿ ಏನು ಮಾಡಬೇಕೆಂದು ಹೇಳಿದರೆ ಸರ್ಕಾರ ಒಂದು ನಿರ್ಣಯ ತೆಗೆದುಕೊಳ್ಳಬೇಕು. ಮೊದಲನೆಯದಾಗಿ ಪುಂಡಾ ಗಂದಾಗ ಹಾಕಬೇಕು, ಎರಡನೆಯದು ಅಲ್ಲಿ ವಯಸ್ಸಿನ ಮುತ್ಕಳು ಎಷ್ಟಿದ್ದಾರೆ, ಅವರೆಲ್ಲರಿಗೂ ಕೆಲಸ ಕೊಡಬೇಕು. ಹಾಗೂ ಸರ್ಕಾರಿ ಜಮೀನು ಇದ್ದರೆ, ರೂಲ್ಸ್ ಕೆತ್ತಿಹಾಕಿ, ಯಾರ್ಯಾರು ನಷ್ಟಕ್ಕೆ ಒಳಗಾಗಿದ್ದಾರೆ, ಯಾರ್ಯಾರು ದಿಗ್ಬಂಧನಕ್ಕೆ ಒಳಗಾಗಿದ್ದಾರೆ, ಅವರಿಗೆ ನೇರವಾಗಿ, ಪ್ರಾಪರ್ಟಿ ರೈಟ್ಸ್ ಕ್ರಿಯೇಟ್ ಮಾಡಿದರೆ, ಪುನಃ ಅವರು ಈ ರೀತಿಯಾಗಿ ಮಾಡುವುದಿಲ್ಲ. ಅವರ ಮೇಲೆ ಭಾರ ಹಾಕಿ ಜೀವನ ಮಾಡುವ ಪರಿಸ್ಥಿತಿ ಬರುವುದಿಲ್ಲ. ಒಳಚರಂಡಿ ಮಾಡಿದರೆ ಯಾರೋ ಕಾಂಟ್ರಾಕ್ಟ್ ಮಾಡಿ ದುಡ್ಡು ಹೊಡೆದುಕೊಂಡು ಹೋಗುತ್ತಾರೆ. ಆದರೆ ಇವರಿಗೆ ಮಾತ್ರ ಪರಿಹಾರ ಸಿಕ್ಕುವುದಿಲ್ಲ. ಆದ್ದರಿಂದ ನಾನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇಂತಹ ವ್ಯವಸ್ಥೆಯನ್ನು ತಾವು ಯೋಚನೆ ಮಾಡಬೇಕು. ನೀವು ಯೋಚನೆ ಮಾಡುವುದರಿಂದ, ಅವರಿಗೆ ಪಾಠ ಆಗುತ್ತದೆ. ಇವರು ವ್ಯವಸ್ಥಿತ ರೀತಿಯಲ್ಲಿ, ಗೌರವದಿಂದ ಜೀವನ ಮಾಡುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಇದನ್ನು ತಾವು ಯೋಚನೆ ಮಾಡಿ.

ಶ್ರೀ ಆರ್. ವೆಂಕಟರಾವಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಇಂತಹ ಘಟನೆಗಳು ಅಮೃತೂರಿನಲ್ಲಿಯೇ ಅಲ್ಲ, ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಕಡೆ ಜರುಗಿವೆ. ನಮ್ಮ ಹಿಂದೂ ಸಮಾಜದಲ್ಲಿ ಇದೊಂದು ದುರಂತ. ದುರಾದೃಷ್ಟವಶಾತ್ ನೂರಾರು ಹಳ್ಳಿಗಳಲ್ಲಿ ಬಹಿಷ್ಕಾರ ಹಾಕುತ್ತಾರೆ. ನಮಗೆ ಅಮೃತೂರಿನ ವಿಷಯ ನಮ್ಮ ಸ್ನೇಹಿತರಿಂದ, ಪೇಪರಿನಲ್ಲಿ ಬಂದುದರಿಂದ ನಮಗೆ ಗೊತ್ತಾಯಿತು. ಈಗಲೂ ಕೂಡ ನಾನು ಮೂಲಭೂತವಾಗಿ ಮಾನ್ಯ ಹೆಗಡೆಯವರನ್ನು ಕೇಳಿಕೊಳ್ಳುತ್ತೇನೆ. ಈಗಲೂ ಕೂಡ ಹಿಂದೂ ದೇವಸ್ಥಾನದಲ್ಲಿ ಪಿಜಿ ಪರ್ಸೆಂಟ್ ನಿಮ್ನವರ್ಗದವರನ್ನು ಬಿಡುತ್ತಿಲ್ಲ ಆದುದರಿಂದ ಒಂದು ಪಕ್ಷ ನಡೆಸಿ, ನಿಮ್ನವರ್ಗದವರನ್ನು ಬಲಾತ್ಕಾರವಾಗಿ, ನೀವೇ ಹೋಗಿ, ಪ್ರತಿಷ್ಠಿತ ವ್ಯಕ್ತಿಗಳು ಸೇರಿ, ದೇವಸ್ಥಾನಕ್ಕೆ ಬಿಡಿಸುವ ಪ್ರಯತ್ನ ಮಾಡಬೇಕು. ಇದಕ್ಕೋಸ್ಕರ ಒಂದು ಪಕ್ಷವನ್ನು ಆಚರಿಸಿ. ಅದು ಜನತಾ ಪಕ್ಷವಾಗಲೀ, ಕಮ್ಯುನಿಸ್ಟ್ ಪಕ್ಷವಾಗಲೀ, ಎಲ್ಲರೂ ಸೇರಿ ಪ್ರತಿಯೊಂದು ಹಳ್ಳಿಗಳಲ್ಲಿ ಆಗತಕ್ಕ ಈ ದುರಂತವನ್ನು ತಪ್ಪಿಸುವುದಕ್ಕೆ ಒಂದು ಪಕ್ಷವನ್ನು ಆಚರಿಸುತ್ತೀರಾ ಎಂಬುದು ಒಂದು ಪ್ರಶ್ನೆ. ಎರಡನೆಯದು ನಿಮ್ನವರ್ಗದವರಿಗೆ ಬಹಿಷ್ಕಾರ ಹಾಕುವುದು ಏಕೆ? ಸಾವಿರಾರು

ವರ್ಷಗಳಿಂದ ಅವರನ್ನು ತುಳಿದಿದ್ದೇವೆ. ಅವರಿಗೆ ಕೂಲಿ ಸಿಕ್ಕುವುದಿಲ್ಲ. ಇವರೂ ಕೂಡ ಬಲಾಢ್ಯರಾಗಿದ್ದು, ಪ್ರಭಾವಿತ ವ್ಯಕ್ತಿಗಳು ಬಹಿಷ್ಕಾರ ಹಾಕಿದರೆ, ನೀವು ಬಹಿಷ್ಕಾರ ಹಾಕಿಕೊಂಡು ಹೋಗಯ್ಯಾ, ನಾವು ನೋಡುತ್ತೇವೆ ಎಂದು ಹೇಳುತ್ತಿದ್ದರು. ಅವ್ಯಾಹತವಾಗಿ ಕೂಲಿ ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆಂದು ಹೇಳಿದ್ದೀರಿ. ನೀವು ಈ ವ್ಯವಸ್ಥೆ ಮಾಡುವುದಕ್ಕೆ ಸಹ ದಿವಸ ಆಗುತ್ತದೆ. ಅಷ್ಟರೊಳಗೆ ಅವರೇ ಒಂದಾಗುತ್ತಾರೆ. ಆದ್ದರಿಂದ ತಕ್ಷಣ ಏನಾದರೂ ಏರ್ಪಾಡು ಮಾಡಬೇಕು. ನೀವು ಸ್ಪಷ್ಟವಾಗಿ ಹೇಳಿದ್ದೀರಿ, ಒಬ್ಬ ಹರಿಜನ ಮನೆಗೆ ೩ ಸಾವಿರ ರೂಪಾಯಿಗಳ ನಷ್ಟವಾಗಿದೆ, ಆ ಮನೆಗಳ ಮೇಲೆ ಕಲ್ಲು ಬಿದ್ದಿದೆ ಎಂದು. ಅವರಿಗೆ ಏನಾದರೂ ಕೊಟ್ಟಿದ್ದೀರಾ? ಬ್ಯುರೋಕ್ರೆಟಿಕ್ ಸೆಟ್ ಅಪ್‌ನಲ್ಲಿ ಇದೆಲ್ಲಾ ಮಾಡುವುದರೊಳಗೆ ಒಂದೆರಡು ತಿಂಗಳು ಆಗುತ್ತವೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ, ಈ ಸಾಮಾಜಿಕ ದೌರ್ಬಲ್ಯವನ್ನು ತಪ್ಪಿಸುವುದಕ್ಕೆ ಈಗಲೂ ಕೂಡ ನಾವು ಒಂದು ಪಕ್ಷವನ್ನು ಆಚರಣೆ ಮಾಡಬೇಕು.

ದೇವಸ್ಥಾನಗಳಲ್ಲಿ ಪೂಜೆ ಮಾಡುತ್ತೇವೆಂದು ಹೋದರೆ, ಅದಕ್ಕೆ ಅವರಿಗೆ ಅವಕಾಶ ಇಲ್ಲ. ಏತಕ್ಕೆ ಇವರು ಪೂಜೆ ಮಾಡಬೇಕೆಂದು ಗೊತ್ತಾಗುತ್ತಿಲ್ಲ. ದೇವಸ್ಥಾನದ ಒಳಕ್ಕೆ ಇವರನ್ನು ಬಿಡದೇ ಹೋದರೆ ಅದಕ್ಕೆ ಒಂದು ದೊಡ್ಡ ಸಮಸ್ಯೆಯ ಹೊಡೆಯಬೇಕಾಗಿತ್ತು. ನಮ್ಮ ಹಿಂದೂ ಸಮಾಜದಲ್ಲಿ ದೇವರುಗಳಿಗೆ ಲೆಕ್ಕವೇ ಇಲ್ಲ. ೩೩ ಕೋಟಿ ದೇವತೆಗಳು ಇದ್ದಾರೆ. ಇವರು ಯಾವುದೋ ಪಟಾಲಮ್ಮ ಪರಿವಾರಮ್ಮನಿಗೋಸ್ಕರ ಹೊಡೆದಾಡಿದ್ದಾರೆ. ದೇವಾಲಯಕ್ಕೆ ಹೋಗಲೂ ಅವಕಾಶ ಇಲ್ಲದಿದ್ದರೆ ಈ ವರ್ಗದ ಜನ ಏನಿದ್ದಾರೆ ಇವರು ಹಿಂದೂ ಸಮಾಜದ ಬಗ್ಗೆ ಏನು ತಿಳಿದುಕೊಳ್ಳುತ್ತಾರೆ. ಸಮಾಜದ ದುರ್ಬಲವರ್ಗಗಳ ಬಗ್ಗೆ ರಕ್ಷಣೆ ಕೊಡಬೇಕಾದರೆ ಕಾನೂನನ್ನು ಸ್ಟ್ರಿಕ್ಟ್ ಆಗಿ ಎನ್‌ಫೋರ್ಸ್ ಮಾಡಬೇಕು. ಹಾಗೆ ಮಾಡಿದ್ದೇವೆ, ಹೀಗೆ ಮಾಡಿದ್ದೇವೆ ಎಂದರೆ ಇದು ಹೋಗುವುದಿಲ್ಲ. ದೇವಾಲಯಗಳಿಗೆ ಪರಿಶಿಷ್ಟ ಜಾತಿಯವರನ್ನು ಕರೆದುಕೊಂಡು ಹೋಗಲು ಕರ್ನಾಟಕ ರಾಜ್ಯದಲ್ಲಿ ಒಂದು ಪಕ್ಷಾಚರಣೆಯನ್ನು ನಾವು ಮಾಡುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಖರ್ಗೆಯವರು ಹೇಳಿದಹಾಗೆ ಇವತ್ತು ದೇವಸ್ಥಾನಗಳಿಗೆ ಹರಿಜನರು ಹೋಗಿ ಪೂಜೆ ಮಾಡುವುದು ನಮ್ಮ ಸಮಾಜದಲ್ಲಿ ಒಂದು ದೊಡ್ಡ ಅಪರಾಧವಾಗಿದೆ. ಹಾಗೂ ತಪ್ಪಾಗಿದೆ. ಆಮ್ಮತೂರು ಪ್ರಕರಣದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅಲ್ಲಿಯ ತಹಸೀಲ್ದಾರ್‌ರವರು, ಆ ಊರಿನ ಪರಿಶಿಷ್ಟ ಜಾತಿಗೆ ಸೇರಿದ ಜನರನ್ನು ೧೭ನೇ ತಾರೀಖು ಪಟಾಲಮ್ಮನ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಪೂಜೆ ಮಾಡಿಸಿದರು. ಆ ಪೂಜೆ ಮಾಡಿಸಿದ್ದೇ ಒಂದು ಕಾರಣವಾಗಿ ಗಲಾಟೆಯಾಗಿದೆ. ಎರಡೂ ಕಡೆ ಹೊಡೆದಾಟವಾಗಿ ಕ್ರಮ ತೆಗೆದುಕೊಂಡಿದ್ದನ್ನು ನಾನು ಓದಿ ಹೇಳಿದ್ದೇನೆ. ಕಾಲೇಜಿನವರು ಎಚ್ಚರಿಕೆ ವಹಿಸಿದ್ದರೆ ಈ ಘಟನೆ ನಡೆಯುತ್ತಿರಲಿಲ್ಲ ಎಂದು ಹೇಳಿದ್ದಾರೆ. ನಾನು ಅಲ್ಲಿಗೆ ಹೋಗಿ ವಿಚಾರಿಸಿದಾಗ ಇದರಲ್ಲಿ ಕೆಲವು ಭಾಗ ಸತ್ಯ ಇದೆ ಎಂದು ಅನಿಸಿತು. ಅಲ್ಲಿರತಕ್ಕಂಥ ಪಿ.ಎಸ್.ಐ. ಚಿಕ್ಕಣ್ಣನವರು ಇದರ ಬಗ್ಗೆ ಮುಂಜಾಗ್ರತೆ ವಹಿಸಿದ್ದರೆ ಈ ಘಟನೆಯನ್ನು ತಪ್ಪಿಸಬಹುದಾಗಿತ್ತು. ಅದಕ್ಕಾಗಿ ಅವರ ಬಗ್ಗೆ ವಿಚಾರಣೆಗೆ ಆಜ್ಞೆ ಮಾಡಿದೆ. ಅವರು ತಪ್ಪಿತಸ್ಥರು ಎಂದು ಕಂಡು ಬಂದರೆ ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ. ಸ್ವಾತಂತ್ರ್ಯ ಬಂದು ಸಲವತ್ತು ವರ್ಷವಾದರೂ ಸಾಮಾಜಿಕ ಬಹಿಷ್ಕಾರ ಎನ್ನುವುದು ನಡೆದಿದೆ. ಅನ್‌ಟಚಬಿಲಿಟಿ ಆಕ್ಟ್ ಇದೆ. ಅನ್‌ಟಚಬಿಲಿಟಿ ಅಬಾಲಿಷ್ ಆಗಿದೆ ಎಂದು ಹೇಳುತ್ತಿದ್ದೇವೆ, ಪಿ.ಸಿ.ಆರ್ ಆಕ್ಟ್ ಇದೆ, ಇಷ್ಟೆಲ್ಲಾ ಇದ್ದರೂ ಕೂಡಾ ಸಾಮಾಜಿಕ ಬಹಿಷ್ಕಾರಗಳು ಆಗುತ್ತಿವೆ ಇದು ಬಹಳ ದುರಾದೃಷ್ಟಕರ ಪಿ.ಸಿ.ಆರ್. ಆಕ್ಟ್ ಬಗ್ಗೆ ಜನರಿಗೆ ಸಾಕಷ್ಟು ತಿಳುವಳಿಕೆ ಕೊಡುತ್ತಿದ್ದೇವೆ. ಇದರ ಬಗ್ಗೆ ಮೊನ್ನೆ ತಾನೆ ಒಂದು ವರ್ಕ್‌ಷಾಪ್ ನಡೆಸಿದ್ದೇವೆ. ತಾವೇನು ಪೊಲೀಸಗಂದಾಯ ವಿಧಿಸಬೇಕು ಎಂದು ಹೇಳಿದ್ದೀರಿ, ಅದರ ಬಗ್ಗೆ ಸರಕಾರ ಹಿಂದೆ ಮುಂದೆ ನೋಡುವುದಕ್ಕೆ ತಯಾರಾಗಿಲ್ಲ. ಇದಕ್ಕಾಗಿ ಕಾನೂನು ಬದಲಾವಣೆ ಮಾಡುವುದರ ಬಗ್ಗೆ ಏನು ಮಾಡಬೇಕೆಂಬುದರ ಬಗ್ಗೆ ಎರಡು ದಿವಸ ನಾವು ವರ್ಕ್‌ಷಾಪ್ ನಡೆಸಿದ್ದೇವೆ. ಈ ವಿಚಾರದಲ್ಲಿ ನಾವು ಹಿಂದೆ ಮುಂದೆ ನೋಡುವುದಿಲ್ಲ. ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇವೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ವೆಂಕಟರಾಮಯ್ಯನವರು ದೇವಸ್ಥಾನಗಳಿಗೆ ಹರಿಜನರನ್ನು ಪ್ರವೇಶ ಮಾಡಿಸುವುದಕ್ಕೆ ಒಂದು ಆಂದೋಲನವನ್ನು ಏತಕ್ಕೆ ಮಾಡಬಾರದು ಎಂದು ಹೇಳಿದರು. ಮೈಸೂರಿನ ಜಿಲ್ಲಾಧಿಕಾರಿಗಳಾದ

ಬಳಿಗಾರ್‌ರವರು ಒಬ್ಬ ಪರಿಶಿಷ್ಟ ಜಾತಿಯ ಯುವಕನನ್ನು ದೇವಸ್ಥಾನದ ಪೂಜಾರಿಯಾಗಿ ಅಪಾಯಿಂಟ್ ಮಾಡಿರುತ್ತಾರೆ. ಇಂತಹ ಕಾರ್ಯಕ್ರಮಗಳು ಇನ್ನೂ ನಡೆಯಬೇಕಾಗಿದೆ. ಈ ದಿಸೆಯಲ್ಲಿ ನಾವು ಪ್ರಯತ್ನ ಶೀಲರಾಗಿದ್ದೇವೆ ಎಂಬ ಮಾತನ್ನು ಹೇಳುತ್ತಿದ್ದೇನೆ. ಇನ್ನು ಲಾಸ್ ಆದ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬ ಪ್ರಶ್ನೆಯನ್ನು ಕೇಳಿದ್ದಾರೆ. ಈಗಾಗಲೇ ನಾವು ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ ಬಿಟು ಬಿದ್ದ ಗಾಯವಾದ ಮೂರು ಜನರಿಗೆ ತಲಾ ಒಂದು ಸಾವಿರ ರೂಪಾಯಿಗಳ ಪರಿಹಾರ ಕೊಟ್ಟಿದ್ದೇವೆ. ಅಲ್ಲಿ ಲುಕ್ಸಾನು ಏನಾಗಿದೆ ಅದನ್ನು ಅಸೆಸ್ ಮಾಡಿ ಪರಿಹಾರ ಕೊಡುತ್ತೇವೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು). — ಮಾನ್ಯ ಅಧ್ಯಕ್ಷರೇ, ಆಗಾಗ್ಗೆ ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ ಇಡೀ ದೇಶದಲ್ಲಿ ಹರಿಜನರ ಮೇಲೆ, ಮತ್ತು ಗಿರಿಜನರ ಮೇಲೆ ದೌರ್ಜನ್ಯ ಕೃತ್ಯಗಳು ನಡೆಯುತ್ತಲೇ ಇದೆ. ಇದನ್ನು ಆಗಾಗ್ಗೆ ನಾವು ಇಲ್ಲಿ ಎತ್ತುತ್ತೇವೆ ಮತ್ತು ಖಂಡಿಸುತ್ತೇವೆ. ಆದರೂ ಇದನ್ನು ನಮ್ಮ ಸಮಾಜದಿಂದ ಯಾವರೀತಿ ಕಿತ್ತೊಗೆಯಬೇಕು ಆ ರೀತಿಯ ಕಲಸ ಇನ್ನೂ ಆಗಿಲ್ಲಿ ಯಾವ ಹಳ್ಳಿಯಲ್ಲಿ ಹರಿಜನರ ಮೇಲೆ ದೌರ್ಜನ್ಯ ಆಗುತ್ತದೆ ಅಲ್ಲಿ ಸಂಪೂರ್ಣವಾಗಿ ಒಂದು ದಂಡ ಹಾಕಬೇಕು, ಪ್ಯುನಿಟೀವ್ ಫೈನ್ ಹಾಕಬೇಕೆಂದು ಒಂದು ಸೂಚನೆ ಇಲ್ಲಿ ಬಂತು. ಲೀಗಲ್ ಆಗಿ ಇದಂ ಸಾಧ್ಯ ಇದ್ದರೆ ನಮ್ಮ ಸರಕಾರ ಖಂಡಿತವಾಗಿಯೂ ಇದನ್ನು ಮಾಡುತ್ತದೆ ಎಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಲಾಸ್ಟ್ ಟೈಮ್ ಬೆಂಡಿಗೇರಿ ಪ್ರಕರಣದ ಬಗ್ಗೆ ಇಲ್ಲಿ ಚರ್ಚೆ ಆದಾಗ, ಇದರ ಬಗ್ಗೆ ಎಕ್ಸಾಮಿನ್ ಮಾಡುತ್ತೇವೆ. ಸಾಧ್ಯವಾದರೆ ಮಾಡುತ್ತೇವೆ ಎಂದು ಹೇಳಿದ್ದೀರಿ ಇದು ಸಾಧ್ಯ ಇದೆ It is possible When they are doing contrery to the Act and when they are violating the untouchability Act, it can be done. ಆದರ ಪ್ರಕಾರ ಅವರು ನಡೆದುಕೊಳ್ಳುತ್ತಿಲ್ಲ. ಯಾವಾಗ ಅವರು ತಪ್ಪು ಮಾಡುತ್ತಾರೆ ಆಗ ಅವರು ಶಿಕ್ಷೆಗೆ ಗುರಿಯಾಗಲೇ ಬೇಕು. for that you bring. In the case of Slums Goonda Act is there Like that you bring this act. ಆರು ತಿಂಗಳ ಹಿಂದೆ ಈ ಸದನದಲ್ಲಿ ಬೆಂಡಿಗೇರಿ ಪ್ರಕರಣ ಬಂದಾಗ ತಾವು ಇದರ ಬಗ್ಗೆ ಒಪ್ಪಿಕೊಂಡಿದ್ದಿರಿ. ಇದಂ ಮಾನ್ಯ ಬಸವಣ್ಣಪ್ಪನವರಿಗೆ ಜ್ಞಾಪಕವಿರಬಹುದು. ಅಥವಾ ಸದನದಲ್ಲಿದ್ದವರು ಯಾರಿಗಾದರೂ ಗೊತ್ತಿರಬಹುದು. ತಾವು ಬೇಕಾದರೆ ಪ್ರೊಸೀಡಿಂಗ್ಸ್ ತರಿಸಿ ನೋಡಿ ಎಗ್ಸಾಮಿನ್ ಮಾಡುತ್ತೇನೆಂದು ಅವರು ಒಪ್ಪಿಕೊಂಡಿದ್ದಾರೆ ನಾನೇ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಐ.ಪಿ.ಸಿ. ಪ್ರಕಾರ ಆದನ್ನು ಮಾಡುವುದಕ್ಕೆ ಬರುತ್ತದೆ. ಇಲ್ಲದಿದ್ದರೆ ಪೋಲೀಸ್ ಆಕ್ಟ್‌ಗೆ ಅಮೆಂಡ್‌ಮೆಂಟ್ ತನ್ನಿ.

ಶ್ರೀ ಬಿ. ಬಸವಲಿಂಗಪ್ಪ.— ಪೋಲೀಸ್ ಆಕ್ಟ್‌ನಲ್ಲಿ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಆಗ ಅದಂಗೆ ಸ್ವಲ್ಪ ವೆದರಿಕೆಯಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಸರ್ಕಾರ ನಮ್ಮ ಜೇಬಿನಲ್ಲಿ ಇದೆ, ನಾವು ಏನು ಬೇಕಾದರೂ ಮಾಡಬಹುದೆಂದು ಸರ್ಕಾರಿಯವರು ತಿಳಿದುಕೊಳ್ಳುತ್ತಾರೆ. ನಮ್ಮನ್ನು ಯಾರೂ ನೋಡುವವರೇ ಇಲ, ಕೇಳುವವರೇ ಇಲ್ಲ, ಎಂದು ವೀಕರ್ ಸೆಕ್ಷನ್ಸ್ ತಿಳಿದುಕೊಳ್ಳುತ್ತಾರೆ. ದಯವಾಡಿ ಅಸೆಂಬ್ಲಿ ಇನ್ನು ೫೦ ದಿವಸ ಇರುತ್ತದೆ, ಈ ಸದನದಲ್ಲಿ ಒಂದಂ ತಿದ್ದುಪಡಿ ಮಸೂದೆ ತರತಕ್ಕಂಥ ವ್ಯವಸ್ಥೆ ಮಾಡಿ.

ಶ್ರೀ ಜಿ. ಬಸವಣ್ಣಪ್ಪ.— ಮಾನ್ಯ ಅಧ್ಯಕ್ಷರೇ...

ಶ್ರೀ ಹೆಚ್.ಡಿ. ದೇವೇಗೌಡ,— ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ನಾನು ಒಂದು ವಿಷಯವನ್ನು ನೆನಪಿಗೆ ತರುವುದಾದರೆ ನಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಶ್ರೀಮಾನ್ ಆರ್.ಎಂ. ಪಾಟೀಲರು ಗೃಹ ಸಚಿವರಾಗಿದ್ದಾಗ ಎಲ್ಲೆಲ್ಲಿ ಈ ರೀತಿ ಹರಿಜನ ಮತ್ತು ಗಿರಿಜನರ ಮೇಲೆ ದಬ್ಬಾಳಿಕೆಗಳು ನಡೆಯುತ್ತವೆ ಇವುಗಳನ್ನು ತಡೆಗಟ್ಟಲು ಒಂದು ಕಾನೂನು ತರುತ್ತೇನೆಂದು ಆಶ್ವಾಸನೆಯನ್ನು ಈ ಸದನದಲ್ಲಿ ಕೊಟ್ಟಿದ್ದರು, ಅವಿಭಾಜ್ಯ ಕಾಂಗ್ರೆಸ್‌ನಲ್ಲಿಯೇ ಈ ವಿಷಯ ಪ್ರಸ್ತಾಪವಾಗಿ ಕಾನೂನು ಕೂಡ ಮಾಡಿದ್ದಾರೆ. ಆದರೆ ಆ ಕಾನೂನು ಜಾರಿಗೆ ಕೊಟ್ಟಿಲ್ಲವೆಂದು ನನ್ನ ಭಾವನೆ ದಯವಾಡಿ ಅದನ್ನು ಸ್ವಲ್ಪ ನೋಡಿ.

ಶ್ರೀ ರಾಮಕೃಷ್ಣ ಹೆಗಡೆ — ನಾನು ಈಗಾಗಲೇ ಹೇಳಿದ್ದೇನೆ. ಕಾನೂನು ಪ್ರಕಾರ ಮಾಡುವುದಕ್ಕೆ ಬಂದರೆ ಅದನ್ನು ಮಾಡುತ್ತೇನೆ. ಇಲ್ಲದಿದ್ದರೆ ಕಾನೂನು ತಿದ್ದುಪಡಿ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೇ ಎರಡನೆಯದಾಗಿ ಪದೇ ಪದೇ ಆರ್ಥಿಕ ದಿಗ್ಬಂದನ ಎಲ್ಲಾ ಕಡೆ ನಡೆಯುತ್ತಿದೆ. ಅದಕ್ಕೆ ನಾನೊಂದು ಸಲಹೆ ಮಾಡಿದ್ದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿಲ್ಲ. ನಾನು ಕೊಟ್ಟ ಸಲಹೆ ಏನೆಂದರೆ ಎಲ್ಲೆಲ್ಲಿ ಈ ಜನ ಬೆಗರ್‌ಮುಕಂ ಮಾಡಿ ಕೊಂಡಿದ್ದಾರೋ ಆ ಜಮೀನುಗಳನ್ನು ಆ ಜನಗಳಿಗೆ ಕೊಡಕ್ಕಂಥಾದ್ದು ಮಾಡಿ ಎಂದು. ಅದಕ್ಕೆ ಕಾನೂನಿನ ವಿರೋಧವಿದ್ದರೂ ಕೂಡ ಮಂಜೂರು ಮಾಡಿ ಆ ಸಮಸ್ಯೆಯನ್ನು ಸೆಟಲ್ ಮಾಡಿ ಮತ್ತು ಅವರ ಪಕ್ಕೇಗೆ ಕೆಲಸ ಕೊಡಿ ಎಂದು ಹೇಳಿದ್ದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟ ಉತ್ತರ ಕೊಡಬೇಕು.

ಶ್ರೀ ಆರ್. ವೆಂಕಟರಾಮಯ್ಯ.— ಸ್ವಾಮಿ ನಾನು ಮಾನ್ಯ ರಾಮಕೃಷ್ಣ ಹೆಗಡೆಯವರಲ್ಲಿ ಕೇಳಿ ಕೊಳ್ಳುವುದು ಇಷ್ಟೇ ಕಾನೂನು ತಂದು ಇಂಥಾದ್ದನ್ನು ತಡೆಗಟ್ಟಲು ಸಾಧ್ಯವಿಲ್ಲ. ಆ ರೀತಿ ಮಾಡು ತ್ತೇನೆಂದರೂ ಕೂಡ ಅದು ತಪ್ಪು, ನನಗನ್ನಿಸುತ್ತದೆ ಇದು ಕಾನೂನಿನಿಂದ ಆಗುವುದಿಲ್ಲ. ಎಲ್ಲಾ ಪಕ್ಷಗಳು ಒಗ್ಗಟ್ಟಾಗಿ ಈ ಸಮಾಜದಲ್ಲಿರತ್ಕಂಥ ಪಿಡುಗನ್ನು ದೂರ ಮಾಡಲು ಪ್ರಯತ್ನ ಮಾಡಿದರೆ ಆಗ ಅದು ಸ್ವಲ್ಪ ಜರುಗಬಹುದು. ಈ ಬಗ್ಗೆ ಸರ್ಕಾರ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನನಗೆ ಸ್ಪಷ್ಟ ಉತ್ತರ ಕೊಡಬೇಕು. ಏಕೋ ಅವರು ಸ್ವಲ್ಪ ಹಿಂದೇಟು ಹಾಕುತ್ತಿರುವಂತೆ ಕಾಣುತ್ತದೆ. ಈಗಾಗಲೇ ಸಿ.ಆರ್.ಇ. ಸೆಲ್ ಫೇಲ್ ಆಗಿದೆ. ಈಗ ಮತ್ತೊಂದು ಹೊಸ ಕಾನೂನು ಮಾಡಿದರೆ ಜನರಲ್ಲಿ ಮತ್ತೇ ಅದೇ ಭಾವನೆ ಬರುತ್ತದೆ. ತಾವು ಹಿಂದೇಟು ಹಾಕದೆ ಸ್ಪಷ್ಟ ಉತ್ತರ ಕೊಡಿ.

ಶ್ರೀ ರಾಮಕೃಷ್ಣ ಹೆಗಡೆ.— ನಾನೇನು ಹಿಂದೇಟು ಹಾಕುತ್ತಿಲ್ಲ. ಸ್ಪಷ್ಟವಾಗಿ ಇಷ್ಟೊಂದು ಪಾಜಿಟೀವ್ ಉತ್ತರ ಬೇರೆ ಯಾರು ಕೊಟ್ಟಿರಲಿಕ್ಕಿಲ್ಲ. ಆಮೇಲೆ ಪುಂಡುಗಂದಾಯ ಹಾಕುತ್ತೇವೆಂದು ನಾನು ಸ್ಪಷ್ಟವಾಗಿಯೇ ಹೇಳಿದ್ದೇನೆ. ಕಾಯ್ದೆಯಿಂದ ಸಮಸ್ಯೆ ಬಗೆಹರಿಯುವುದಿಲ್ಲವೆಂದು ತಾವು ಹೇಳಿದ್ದೀರಿ, ಸಾಮಾಜಿಕವಾಗಿ ಸಾಮೂಹಿಕ ಆಕ್ಷನ್ ತೆಗೆದುಕೊಳ್ಳಬೇಕೆಂದು ಹೇಳಿದಿರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ. ತಾವೇ ಸಮಾಜದಲ್ಲಿ ಮೇಲ್ವರ್ಗದವರಾಗಿದ್ದೀರಿ, ಒಂದು ಚಳುವಳಿ ಪ್ರಾರಂಭ ಮಾಡಿ.

ನಿಯಮ ೩೫೪ರ ಮೇರೆಗೆ

ಮಂಗಳೂರು ಆರ್.ಟಿ.ಓ. ಕಚೇರಿಯಿಂದ ಭ್ರಷ್ಟಾಚಾರವನ್ನು ತೊಲಗಿಸುವುದು

ಶ್ರೀ ಬಿ.ಎಂ. ಇದಿನಬ್ಬ.— ಮಾನ್ಯ ಅಧ್ಯಕ್ಷರೆ, ಮಂಗಳೂರಿನಲ್ಲಿರುವ ಆರ್.ಟಿ.ಓ. ಆಫೀಸು ಹಳೆ ಕಟ್ಟಡದಿಂದ ಹೊಸ ಕಟ್ಟಡಕ್ಕೆ ಬಂದಿದೆ. ಆದರೆ ಈ ಆಫೀಸಿನ ಭ್ರಷ್ಟಾಚಾರದ ದೂರುಗಳು ಹಿಂದಿನಂತೆಯೇ ಈಗಲೂ ಕೇಳಿ ಬರುತ್ತಿದೆ. ಅಲ್ಲಿನ ಸಿಬ್ಬಂದಿ ವರ್ಗದಲ್ಲಿ ಕೆಲವರು ತುಂಬಾ ಶ್ರೀಮಂತರಾದ ವರದಿಗಳು ಕೇಳಿಸುತ್ತಲೇ ಇದೆ. ಈ ಆಫೀಸಿನಲ್ಲಿ ದಲ್ಲಾಳಿಗಳು ಒಂತಲ್ಲೊಂದು ರೀತಿಯಿಂದ ಗ್ರಾಹಕರನ್ನು ವಂಚಿಸುತ್ತಿದ್ದಾರೆಂಬ ದೂರು ಕೇಳುತ್ತಲೇ ಇದೆ. ಈ ಅನಿಷ್ಟಗಳನ್ನು ನೀಗಿಸಲು ಕೆಲವು ಕಾರ್ಯಕ್ರಮ ರೂಪಿತವಾಗಿದೆಯೆಂದು ಹೇಳಲಾಗುತ್ತಿದೆ. ಆದರೆ ಮಂಗಳೂರು ಆರ್.ಟಿ.ಓ.ದಲ್ಲಿ ಅದು ಕಾರ್ಯಗತವಾಗಿಲ್ಲ. ಈಬಗ್ಗೆ ಹೊಸ ಕ್ರಮಗಳೇನಾದರೂ ಜಾರಿಯಲ್ಲಿದೆಯೇ? ಇಲ್ಲಿನ ಭ್ರಷ್ಟಾಚಾರ ನಿಲ್ಲುವುದು ಪ್ರಾಮುಖ್ಯ ವಿಷಯವಾಗಿದೆ. ಈ ಕುರಿತು ಸಾರಿಗೆ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಚ್. ವಿಶ್ವಾಂತಯ್ಯ.— ನಾನು ಉತ್ತರ ತರಿಸಿಕೊಡುತ್ತೇನೆ.

ಮಾರ್ಗಾನುಕುಂಟೆ ವೈದ್ಯಾಧಿಕಾರಿಗಳು ಕೇಂದ್ರಸ್ಥಾನದಲ್ಲಿ ಇಲ್ಲದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು.

ಶ್ರೀ ಬಿ. ನಾರಾಯಣಸ್ವಾಮಿ.— ಮಾನ್ಯ ಅಧ್ಯಕ್ಷರೆ, ಬಾಗೇಪಲ್ಲಿ ಕ್ಷೇತ್ರದ ಮಾರಗಾನಕುಂಟೆ ಸಾರ್ವಜನಿಕರ ಕಡೆಯಿಂದ ಹಲವಾರು ದೂರುಗಳು ಬಂದಿರುತ್ತವೆ. ಮಾರಗಾನಕುಂಟೆ ವೈದ್ಯಾಧಿಕಾರಿಗಳು ಕೇಂದ್ರ ಸ್ಥಾನದಲ್ಲಿರುವ ಇವರು ಬಾಗೇಪಲ್ಲಿಯಲ್ಲಿ ಸ್ವಂತ ಆಸ್ಪತ್ರೆಯನ್ನು ತೆಗೆದುಕೊಂಡು